ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
KARNATAKA RENEWABLE ENERGY DEVELOPMENT LIMITED
( Government of Karnataka Undertaking )
K.R.E.D.L

ಕೆಆರ್‌ಇಡಿಎಲ್/07/ಭೂಮಾಲೀಕತ್ವ ರೈತರು-189/2015/Reg no. 46/844 ದಿನಾಂಕ: 17 MAR 2015

ಗೆ,
Sri. Sreenidhi. V
Talavatty, Imangala,
Hiriyur, chitradurga.

one MW only

ಮಾನ್ಯರೇ,

ವಿಷಯ: ಸೌರ ನೀತಿ 2014-15ರ ಅನುಷ್ಠಾನ, ಭೂಮಾಲಿಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯ ಯೋಜನೆಯಡಿಯಲ್ಲಿ 1 ರಿಂದ 3 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಹಂಚುವ ಬಗ್ಗೆ.

ಉಲ್ಲೇಖ:
1. ಸೌರ ನೀತಿ 2014-21, ಅಧಿಸೂಚನೆ ಸಂಖ್ಯೆ ಇಎನ್ 21 ವಿಎಸ್‌ಸಿ 2014 ದಿನಾಂಕ 22.5.2014
2. ಸರ್ಕಾರಿ ಆದೇಶ ಸಂಖ್ಯೆ ಇಎನ್ 62 ವಿಎಸ್‌ಸಿ 2014, ಬೆಂಗಳೂರು, ದಿನಾಂಕ 26.08.2014.
3. ಕೆಆರ್‌ಇಡಿಎಲ್ ಪ್ರಕಟಣೆ ದಿನಾಂಕ 19.09.2014.
4. ಸರ್ಕಾರಿ ಆದೇಶ ಸಂಖ್ಯೆ ಇಎನ್ 62 ವಿಎಸ್‌ಸಿ 2014 ಬೆಂಗಳೂರು ದಿನಾಂಕ 9.03.2015.

ಸೌರ ನೀತಿ 2014-21 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ವಿಶೇಷವಾಗಿ ಸೌರ ನೀತಿಯ ಕಲಂ 8, ಪ್ರವರ್ಗ 1, ವರ್ಗ 1 ರ ಅಡಿಯಲ್ಲಿ ಭೂಮಾಲಿಕತ್ವದ ರೈತರ ಭೂಮಿಯನ್ನು ಬಳಸಿ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸುವ ಸಲುವಾಗಿ ಯೋಜನೆಗಳನ್ನು ಹಂಚಿಕೆ ಮಾಡಲು ಸರ್ಕಾರವು ಉಲ್ಲೇಖ (2) ರಲ್ಲಿ ಮಾರ್ಗ ಸೂಚಿಗಳನ್ನು ಹೊರಡಿಸಿತ್ತು.

ಮಾರ್ಗಸೂಚಿಗಳು ಮತ್ತು ಸರ್ಕಾರಿ ಆದೇಶಕ್ಕನುಗುಣವಾಗಿ ಕೆಆರ್‌ಇಡಿಎಲ್ ದಿನಾಂಕ 19.09.2014 ರಂದು ರಾಜ್ಯದ ಪ್ರಮುಖ ದಿನ ಪತ್ರಿಕೆಗಳ ಮೂಲಕ ಅರ್ಹ ಭೂಮಾಲೀಕರಿಂದ ಅಂತರ್ಜಾಲದ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ಈ ಪ್ರಕಟಣೆಗೆ ತಾವು ಸರ್ವೆ ಸಂಖ್ಯೆ....4..../ತಾಳವಟ್ಟಿ....ಗ್ರಾಮ ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ ಇಲ್ಲಿ 1 ಮೆ.ವ್ಯಾ ಸಾಮರ್ಥ್ಯಕ್ಕೆ ಸಲ್ಲಿಸಿದ್ದ ತಮ್ಮ ಅರ್ಜಿಯನ್ನು ಹಂಚಿಕೆಗಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪರಿಗಣಿಸಲಾಗಿದೆ.

1. ಈ ಹಂಚಿಕೆಗೆ ಪರಿಗಣಿಸಲಾದ ಸರ್ವೆ ಸಂಖ್ಯೆ..........4..........ಯ ನಕ್ಷೆಯನ್ನು (ಟೊಪೊ ಶೀಟ್) ನೀಡಬೇಕು.

2. ಪ್ರತಿ ಮೆ.ವ್ಯಾಗೆ ರೂ.10ಲಕ್ಷದಂತೆ ರೂ 10 ಲಕ್ಷಗಳಿಗೆ ಕಾರ್ಯಕ್ಷಮತೆ **(performance)** ಬ್ಯಾಂಕ್ ಖಾತರಿಯನ್ನು ವ್ಯವಸ್ಥಾಪಕ ನಿರ್ದೇಶಕರು,ಬೆಂಗಳೂರು/~~ಮಂಗಳೂರು/ಹುಬ್ಬಳ್ಳಿ/ಮೈಸೂರು/ಗುಲ್ಬರ್ಗಾ~~ ವಿದ್ಯುತ್ ವಿತರಣಾ ಕಂಪನಿರವರ ಹೆಸರಿಗೆ ಕನಿಷ್ಟ 20 ತಿಂಗಳ ಚಾಲ್ತಿ ಅವಧಿಗೆ ಸಲ್ಲಿಸುವುದು (ನಮೂನೆ ಲಗತ್ತಿಸಲಾಗಿದೆ).

ಮು.ತಿ.ನೊ

39, "ಶಾಂತಿ ಗೃಹ", ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,
ೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು,
ರಮನೆ ರಸ್ತೆ, ಬೆಂಗಳೂರು-560 001.
l: 080-2220 8109 / 2220 7851, Fax: 080-2225 7399

RTI

# 39, "Shanthi Gruha",
Bharath Scouts & Guides Building,
Opp. the Chief Post Master General Office,
Palace Road, Bengaluru - 560 001.
E-mail: kredlmd@gmail.com

3. ಪ್ರತಿ ಮೆ.ವ್ಯಾ ಗೆ ರೂ 1ಲಕ್ಷ + 12.36% ಸೇವಾ ತೆರಿಗೆಯಂತೆ ಪರಿಷ್ಕರಣಾ ಶುಲ್ಕವಾದ ರೂ.1,12,360ನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಇಡಿಎಲ್ ಇವರ ಹೆಸರಿಗೆ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಬೇಕು.

4. ಈ ಸೌರ ಘಟಕವನ್ನು ಸ್ಥಾಪಿಸಲು ಅಗತ್ಯವಾದ ಹಣಕಾಸು ವ್ಯವಸ್ಥೆ, ಇತರ ಶಾಸನಬದ್ಧ ಪರವಾನಗಿಗಳನ್ನು ಪಡೆಯುವುದು ತಮ್ಮ ಜವಾಬ್ದಾರಿಯಾಗಿರುತ್ತದೆ.

5. ಭೂಮಿಯು ಜಂಟಿ ಒಡೆತನದ್ದಾಗಿದಲ್ಲಿ, ಇತರೆ ಜಂಟಿ ಮಾಲೀಕರ ನಿರಾಪೇಕ್ಷಣಾ ಪತ್ರವನ್ನು ಛಾಪಾಕಾಗದದಲ್ಲಿ ಪಡೆದು ನೀಡಬೇಕು. ಮತ್ತು ಅಗತ್ಯವಾದ ಭೂಮಿಯು ಒಂದೇ ಸ್ಥಳದಲ್ಲಿ ಲಭ್ಯವಿರುವ ಅವಶ್ಯಕತೆಯಿದ್ದು ಈ ಬಗ್ಗೆ ಸಂಬಂಧಿತ ವಿದ್ಯುತ್ ಸರಬರಾಜು ಕಂಪನಿಯವರು ಸ್ಥಳ ಪರೀಕ್ಷೆಯ ನಂತರ ಅರ್ಹವೆಂದು ಭಾವಿಸಿದಲ್ಲಿ ಮಾತ್ರ ಈ ಮಂಜೂರಾತಿಯನ್ನು ಪರಿಗಣಿಸಲಾಗುವುದು.

6. ಭೂಮಾಲೀಕತ್ವದ ಪುರಾವೆಯಾಗಿ ಆರ್‌ಟಿಸಿಯನ್ನು ಸಂಬಂಧಪಟ್ಟ ವಿದ್ಯುತ್ ವಿತ್ತರಣಾ ಕಂಪನಿಗೆ ನೀಡಬೇಕು.

7. ಮೇಲಿನ ಷರತ್ತುಗಳನ್ನು ಈ ಪತ್ರದ ದಿನಾಂಕದಿಂದ 60 ದಿನಗಳೊಳಗೆ ಪಾಲಿಸಿ ಎಲ್ಲಾ ದಾಖಲೆಗಳನ್ನು,ಡಿಡಿ ಮತ್ತು ಬ್ಯಾಂಕ್ ಖಾತರಿಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗೆ ಸಲ್ಲಿಸಬೇಕು. ತಪ್ಪಿದಲ್ಲಿ ಹಂಚಿಕೆಯು ರದ್ದಾಗುವುದು.

8. ಷರತ್ತುಗಳನ್ನು ಪಾಲಿಸಿದ ಅರ್ಜಿದಾರರು ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿಮಾಡಲು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳನ್ನು ಸಂಪರ್ಕಿಸುವುದು.

9. ಸೌರ ಘಟಕವನ್ನು ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಹಾಕಿದ 18 ತಿಂಗಳೊಳಗೆ ಪೂರ್ಣಗೊಳಿಸಬೇಕು.

10. ಈ ಹಂಚಿಕೆ ಪತ್ರವು ಕರ್ನಾಟಕ ಉಚ್ಚನ್ಯಾಯಾಲಯದ ಆದೇಶಕ್ಕೆ ಒಳಪಟ್ಟಿರುತ್ತದೆ.

**W.P. No.48045 - 48047/2014**

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

ಪ್ರತಿ:

ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/~~ಮೆಸ್ಕಾಂ/ಹೆಸ್ಕಾಂ/ಗುವಿಕಂ/ಸೆಸ್ಕ್~~ ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.